UNIVERSITY LIBRARY
FRIDAY 22-08-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್‌ನಲ್ಲಿ ರೈತ ಸಂತೆ ನಾಳೆ

ಬೆಂಗಳೂರು: ಕೃಷಿಕರು ಬೆಳೆದ ವಿವಿಧ ಬೆಳೆಗಳ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ 'ರೈತ ಸಂತೆ' ಶನಿವಾರ (ಆ.23) ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿರುವ (ಜಿಕೆವಿಕೆ) ಗಣಪತಿ ದೇವಾಲಯ ಬಳಿ ಆಯೋಜಿಸಲಾಗಿದೆ. ಪ್ರತಿ ತಿಂಗಳ ಕೊನೆಯ ಶನಿವಾರ ನಡೆಯುವ ರೈತ ಸಂತೆಯಲ್ಲಿ ಈ ಬಾರಿ ಸಿರಿಧಾನ್ಯ ಉತ್ಪನ್ನಗಳ ಮಾರಾಟ ವ್ಯವಸ್ಥೆ ಮಾಡಲಾಗುವುದು. ಬಟರ್ ಫ್ರೂಟ್, ಡ್ರ್ಯಾಗನ್ ಫ್ರೂಟ್, ತಾಜಾ ಅಣಬೆ, ಹಲಸು ಸೇರಿ ಹಣ್ಣು-ತರಕಾರಿ, ರಾಜಮುಡಿ ಅಕ್ಕಿ ಇತ್ಯಾದಿ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಲಭ್ಯವಾಗಲಿವೆ. ಸಾವಯವ ಉತ್ಪನ್ನಗಳು, ಜೇನು ಉತ್ಪನ್ನಗಳು, ಎರೆಹುಳು ಗೊಬ್ಬರ, ಅಲಂಕಾರಿಕ ಗಿಡಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು ಸಿಗಲಿವೆ. ವಿವಿ ತೋಟಗಾರಿಕೆ ವಿಭಾಗದಿಂದ ತಾರಸಿ ತೋಟ, ನಗರ ಕೃಷಿ ಕುರಿತು ಮಾಹಿತಿ ನೀಡಲಾಗುತ್ತದೆ ಎಂದು ವಿವಿ ತಿಳಿಸಿದೆ.

Vijayavani pg 03

ಉದಯವಾಣಿ
ಶುಕ್ರವಾರ, ಆಗಸ್ಟ್ 22, 2025

ಜಿಕೆವಿಕೆಯಲ್ಲಿ ನಾಳೆ ರೈತ ಸಂತೆ ಆಯೋಜನೆ

■ ಉದಯವಾಣಿ ಸಮಾಚಾರ

ಬೆಂಗಳೂರು: ರೈತರು ಬೆಳೆದ ಸಾವಯವ ಉತ್ಪನ್ನಗಳನ್ನು ಬೆಂಬಲಿಸಿ, ಪ್ರೋತ್ಸಾಹಿಸುವುದರ ಜೊತೆಗೆ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಶನಿವಾರ 7ನೇ ವಾರದ ರೈತ ಸಂತೆ ಆಯೋಜಿಸಲಾಗಿದೆ. ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಬಳಿ ರೈತ ಸಂತೆ ಬೆಳಿಗ್ಗೆ 7 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ರೈತ ಸಂತೆಯಲ್ಲಿ ವಿಶೇಷವಾಗಿ ಸಿರಿಧಾನ್ಯಗಳು, ಬಟರ್‌ಫ್ರೂಟ್, ತಾಜಾ ಅಣಬೆ ಸೇರಿದಂತೆ ಮೌಲವರ್ಧಿತ ಉತ್ಪನ್ನಗಳಿಗೆ ಒತ್ತು ನೀಡಲಾಗಿದೆ. ಅಲ್ಲದೇ ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು, ಕರಕುಶಲ ವಸ್ತುಗಳು, ಮತ್ತಿತರ ಕೃಷಿ ಸಂಬಂಧಿತ ಉತ್ಪನ್ನಗಳ ಪ್ರದರ್ಶನ, ಮಾರಾಟ ಇರಲಿದೆ ಎಂದು ಜಿಕೆವಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಪಬ್ಲಿಕ್ news1st ಕನ್ನಡDigital
YouTube Channel
Contact 7892254095

ಚಾಲುಕ್ಯಪ್ರಭ
ಕನ್ನಡ ಪತ್ರಿಕ

KAR KAN 200721254
21/8/2025 E PAPER



ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿಲ್ಲಿ ನಡೆಸುವ ವಿಶೇಷ ಕಾರ್ಯಕ್ರಮಗಳಲ್ಲಿ ಒಂದಾದ "ರೈತ ಸಂತೆ" ಎಲ್ಲಾ ಜನ ಸಮೂಹದ ಆಕರ್ಷಣೆಗೆ ಒಳಾಗಾಗಿದ್ದು ಈ ಬಾರಿ ರೈತ ಸಂತೆಯನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತಿದ್ದು ಹಲವಾರು ವಿನೂತನ ತಳಿಗಳಿಗೆ ಸಾಕ್ಷಿಯಾಗಲಿದೆ. ಇದರ ಸಲುವಾಗಿ ದಿನಾಂಕ:23-8-2025 (ಶನಿವಾರ) ಬೆಳಿಗ್ಗೆ 7.00 ರಿಂದ 4.00 ಗಂಟೆಯವರಿಗೆ ಜಿ.ಕೆ.ವಿಕೆ ಆವರಣದ ಗಣಪತಿ ದೇವಸ್ಥಾನದ ಹತ್ತಿರ "ರೈತ ಸಂತೆ"ಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.ಈ ಭಾರಿ ರೈತರ ಸಂತೆಯ ವಿಶೇಷತೆಗಳು ಸಿರಿಧಾನ್ಯಗಳು, ಬಟರ್ ಫ್ರೂಟ್, ಡ್ರಾಗನ್ ಫ್ರೂಟ್, ಗಿಣ್ಣದ ಹಾಲು. ಗುಣಮಟ್ಟದ ರಾಜಮುಡಿ ಅಕ್ಕಿ, ತಜಾ ಅಣಬೆ, ಹೂ, ತರಕಾರಿ ಇತ್ಯಾದಿ. ಇದರ ಜೊತೆಗೆ ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ತೋಟಗಾರಿಕೆ: ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ: ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು: ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಜೇನು ಕೃಷಿ, ವಾಣಿಜೀಕರಣ ಉತ್ಪನ್ನಗಳು, ಪಶು ಸಂಗೋಪನೆ, ಕೃಷಿ ಪ್ರಕಟಣೆಗಳು, ವಿಶ್ವವಿದ್ಯಾನಿಲಯದ ಬಗ್ಗೆ ಮಾಹಿತಿ, ತಾರಸಿ ಕೈತೋಟ/ನಗರ ತೋಟಗಾರಿಕೆ ಇನ್ನು ಮುಂತಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯಿರುತ್ತದೆ.

ಕಾಫಿಗೆ ಕೊಳೆ ರೋಗ

ಉತ್ಪಾದನೆ ಮೇಲೆ ಪರಿಣಾಮ | ಬೆಳೆಗಾರರಿಗೆ ಆತಂಕ



ಜಿಲ್ಲೆಯ ಶಾಂತಳ್ಳಿ, ಸೂರ್ಲಬ್ಬಿ, ಗರ್ವಾಲೆ ಮುಂತಾದ ಕಡೆ ಕಾಫಿ ಮಂಡಳಿಯಿಂದ ಬೆಳೆ ನಷ್ಟದ ಕುರಿತು ಪರಿಶೀಲನೆ ನಡೆಸಲಾಯಿತು.

ಸದ್ಯ ಅತಿ ಹೆಚ್ಚಿನ ಮಳೆಯಿಂದಾಗಿ ಮಣ್ಣಿನಲ್ಲಿ ತೀವ್ರ ತೇವಾಂಶವಿದ್ದು, ಒಮ್ಮೆಲೇ ಹೆಚ್ಚಿನ ಬಿಸಿಲು ಕಾಣಿಸಿಕೊಂಡರೂ ಅದು ಬೆಳೆಗಳ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಕಾಫಿ ಗಿಡದಲ್ಲಿ ಕಾಯಿ ಉದುರುವುದು ಹೆಚ್ಚಾಗುತ್ತದೆ.

- ಚಂದ್ರಶೇಖರ್, ಕಾಫಿ ಮಂಡಳಿ ಉಪ ನಿರ್ದೇಶಕ

■ **ಗಿರೀಶ್ ಪಗಡಿಗತ್ತಲ** ಮಡಿಕೇರಿ
pagadigathalagiri@gmail.com

ಕೊಡಗು ಜಿಲ್ಲೆಯಲ್ಲಿ ಈ ಬಾರಿ ದೀರ್ಘಾವಧಿ ಮಳೆಯಾಗಿರುವುದರಿಂದ ಪ್ರಮುಖ ಬೆಳೆ ಕಾಫಿ ಸೇರಿ ಇತರ ತೋಟಗಾರಿಕಾ ಬೆಳೆಗಳಿಗೂ ಕೊಳೆ ರೋಗದ ಸಮಸ್ಯೆ ಎದುರಾಗಿದ್ದು, ಅತಿ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಈಗಾಗಲೇ ಕಾಫಿ ಉದುರಲಾರಂಭಿಸಿದೆ. ಶೇ.15ರಷ್ಟು ಉದುರುವಿಕೆಯನ್ನು ಕಾಫಿ ಮಂಡಳಿ ಅಂದಾಜಿಸಿದೆ. ಇದರಿಂದ ಈ ಬಾರಿ ಜಿಲ್ಲೆಯಲ್ಲಿ ಕಾಫಿ ಉತ್ಪಾದನೆಯ ಮೇಲೆ ಪರಿಣಾಮ ಬೀರಲಿದೆ.

ಅತಿಯಾದ ಮಳೆ, ತೇವಾಂಶದ ಪರಿಣಾಮವಾಗಿ ಶಿಲೀಂಧ್ರಗಳು ನಾಶವಾಗಿ ಕೊಳೆರೋಗ ಕಂಡುಬರುತ್ತಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕಾಳು ಮೆಣಸು, ಅಡಕೆ ಸೇರಿದಂತೆ ಎಲ್ಲಾ ರೀತಿಯ ತೋಟಗಾರಿಕಾ ಬೆಳೆಗಳಿಗೆ ಸಮಸ್ಯೆ ಉಂಟಾಗಿದೆ ಎಂದಿದ್ದಾರೆ.

ಶೇ.15ರಷ್ಟು ಫಸಲು ನಾಶ: ಜಿಲ್ಲೆಯಲ್ಲಿ ಸೂರ್ಲಬ್ಬಿ, ಶಾಂತಳ್ಳಿ, ಬಿರುನಾಣಿ, ಗರ್ವಾಲೆ ಮತ್ತು ಮುಕ್ಕೋಡ್ಲುಗಳಲ್ಲಿ ವಾಡಿಕೆಗಿಂತ ಶೇ.15ರಷ್ಟು ಹೆಚ್ಚು ಮಳೆಯಾಗಿದೆ. ಆದರೆ, ಭಾಗಮಂಡಲ ಸೇರಿದಂತೆ ಇನ್ನೂ ಕೆಲವು ಕಡೆ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿದೆ. ಈ ಭಾಗದಲ್ಲಿ ಕಾಫಿ ಮಂಡಳಿ ಅಧಿಕಾರಿಗಳು ಪರಿಶೀಲನೆ ನಡೆಸಿ, ಜಿಲ್ಲೆಯ ಉಳಿದ ಕಡೆಗಳಲ್ಲಿಯೂ ಇಂತಹದ್ದೇ ಸಮಸ್ಯೆ ಎದುರಾಗಿರಬಹುದು. ಈಗಲೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಹೆಚ್ಚು ನಷ್ಟದಿಂದ ಪಾರಾಗುವಂತೆ ಅವರು ಸಲಹೆ ನೀಡಿದ್ದಾರೆ.

ಜಂಟಿ ಸರ್ವೇಗೆ ಸಮಿತಿ ರಚನೆ: ಮುಂದಿನ ದಿನಗಳಲ್ಲಿ ಕಂದಾಯ ಇಲಾಖೆ, ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ ಮತ್ತು ಕಾಫಿ ಮಂಡಳಿಯ ಅಧಿಕಾರಿಗಳನ್ನು ಒಳಗೊಂಡಂತೆ ಜಂಟಿ ಸರ್ವೇ ನಡೆಸಲು ಜಿಲ್ಲಾಧಿಕಾರಿ ಸಮಿತಿ ರಚನೆ ಮಾಡಲಿದ್ದಾರೆ. ಸಮಿತಿ ನೀಡುವ ವರದಿಯ ಆಧಾರದ ಮೇಲೆ ಬೆಳೆ ಹಾನಿಗೆ ಸಂಬಂಧಿಸಿದಂತೆ ಪರಿಹಾರ ವಿತರಣೆಗೆ ಕ್ರಮವಾಗಲಿದೆ.

ಬೆಳೆಗಳಿಗೆ ಬಹು ಬಾಧೆ!

ಉಕ ಭಾಗದಲ್ಲಿ ವಾಡಿಕೆಗಿಂತ ಅಧಿಕ ಮಳೆ | ರೈತರು ಕಂಗಾಲು

■ **ಮಲ್ಲಿಕಾರ್ಜುನ ಬಾಳನಗೌಡರ**
ಬೆಳಗಾವಿ
mallugoudra461987@gmail.com



ಯಾದಗಿರಿ ಜಿಲ್ಲೆಯಲ್ಲಿ ನಿರಂತರ ಮಳೆಯಿಂದ ಹತ್ತಿ ಬೆಳೆ ನೀರಿನಲ್ಲಿ ನಿಂತಿರುವುದನ್ನು ಪರಿಶೀಲಿಸಿದ ಕೃಷಿ ಇಲಾಖೆ ಅಧಿಕಾರಿಗಳು.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅತಿವೃಷ್ಟಿ ನೆರೆಯಿಂದ ಹಿಂದಿನ ವರ್ಷಗಳಲ್ಲಿ ಆದ ಬೆಳೆ ಹಾನಿಯ ಕಹಿ ನೆನಪು ಮಾಸುವ ಮುನ್ನವೇ ಈ ಬಾರಿಯ ವರ್ಷಧಾರೆ ರೈತರನ್ನು ಮತ್ತೆ ಇಕ್ಕಟ್ಟಿಗೆ ಸಿಲುಕಿಸಿದೆ. ಹೆಸರು, ಉದ್ದು ಬೆಳೆ ಕೈಗೆ ಬರುವ ಹೊತ್ತಿಗೆ 'ಮಫ್' ಮಳೆ ಆರ್ಭಟಿಸುತ್ತಿರುವುದು ಕೃಷಿಕರನ್ನು ಕಂಗಾಲಾಗಿಸಿದೆ.

ರೋಗ, ಕೀಟಬಾಧೆ: ಅಧಿಕ ಮಳೆಯಿಂದ ತೊಗರಿಗೆ ಬೇರು ಕೊಳೆ ರೋಗ ಹಾಗೂ ಹೆಸರು ಬೆಳೆಗೆ ಹಳದಿ ನಂಜು ರೋಗ ಕಾಣಿಸಿಕೊಂಡಿವೆ. ಕಲಬುರಗಿಯಲ್ಲಿ ತೇವಾಂಶ ಹೆಚ್ಚಳದಿಂದ ತೊಗರಿಗೆ ಬೇರು ಕೊಳೆ ರೋಗ ಬಾಧಿಸಿದೆ. ರಾಯಚೂರಲ್ಲಿ ತಂಪಿನಿಂದ ಬೆಳೆಗೆ ಕೀಟಬಾಧೆ ಕಂಡು ಬಂದಿದ್ದು, ಗಿಡಗಳನ್ನು ಬುಡ ಸಮೇತ ಕಿತ್ತು ಹಾಕುವಂತೆ ಅಧಿಕಾರಿಗಳು ರೈತರಿಗೆ ಸಲಹೆ ನೀಡಿದ್ದಾರೆ. ಬೆಳಗಾವಿಯಲ್ಲಿ ಸೋಯಾಬೀನ್‌ಗೆ ಕೀಟಬಾಧೆ ಹೆಚ್ಚಾಗಿದ್ದು, ಕೆಲ ರೈತರು ಬೆಳೆ ನಾಶಪಡಿಸಿದ್ದಾರೆ. ಈಗ ಮಳೆಯಾಗುತ್ತಿರುವ ಪ್ರದೇಶಗಳಲ್ಲಿ ಇನ್ನಷ್ಟು ದಿನ ಮಳೆ ಮುಂದುವರಿದರೆ ರೋಗ, ಕೀಟಗಳ ಬಾಧೆ ಮತ್ತಷ್ಟು ತೀವ್ರ ಸ್ವರೂಪ ಪಡೆಯುವ ಆತಂಕ ರೈತರದ್ದು. ಈ ವರ್ಷ ಉತ್ತಮ ಮುಂಗಾರಿನ ಮುನ್ಸೂಚನೆ ಕಾರಣ ರೈತರು ಜೂನ್ ಆರಂಭದಲ್ಲೇ ಬಿತ್ತನೆ ಮಾಡಿದ್ದಾರೆ. ಕಲಬುರಗಿ, ಬೀದರ್, ಬಾಗಲಕೋಟೆ, ಬೆಳಗಾವಿ, ವಿಜಯಪುರ, ಕೊಪ್ಪಳ, ಯಾದಗಿರಿ, ರಾಯಚೂರು, ಧಾರವಾಡ ಸೇರಿ ಇತರ ಜಿಲ್ಲೆಗಳಲ್ಲಿ ಮುಂಗಾರು ಹಂಗಾಮಿನಲ್ಲಿ ತೊಗರಿ, ಹೆಸರು, ಶೇಂಗಾ, ಸೋಯಾಬೀನ್, ಹತ್ತಿ, ಗೋವಿನಜೋಳ, ಉದ್ದು, ಬತ್ತ, ಈರುಳ್ಳಿ, ಸೂರ್ಯಕಾಂತಿ ಸೇರಿ ಇತ್ಯಾದಿ ಬೆಳೆ ಬಿತ್ತನೆ ಮಾಡಲಾಗಿದೆ. ಒಳ್ಳೆಯ ಬೆಳೆ ಬರುವ ನಿರೀಕ್ಷೆಯಲ್ಲಿದ್ದ ರೈತರಿಗೆ ಈ ಭಾಗದಲ್ಲಿ ವಾಡಿಕೆಗಿಂತ ಶೇ.20ರಷ್ಟು ಅಧಿಕ ಮಳೆಯಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಹ ಸ್ಥಿತಿ ನಿರ್ಮಾಣವಾಗಿದೆ.

ಬೆಳಗಾವಿ, ಕಲಬುರಗಿ ಅಧಿಕ: ಉ.ಕ. ಭಾಗದ 13 ಜಿಲ್ಲೆಗಳಲ್ಲಿ ಜೂ. 1ರಿಂದ ಆ. 19ರವರೆಗೆ ವಾಡಿಕೆ ಮಳೆ 294 ಮಿ.ಮೀ., ಆದರೆ, 354 ಮಿ.ಮೀ. ಮಳೆ ಸುರಿದಿದೆ. (ಶೇ.20 ಅಧಿಕ) ಕಲಬುರಗಿಯಲ್ಲಿ 409, ಬೆಳಗಾವಿ 539, ಧಾರವಾಡ 406, ವಿಜಯಪುರ 324, ಯಾದಗಿರಿ 358, ಹಾವೇರಿ 329, ಬೀದರ್ 356, ಕೊಪ್ಪಳ 258 ಮತ್ತು ರಾಯಚೂರಲ್ಲಿ 284 ಮಿ.ಮೀ. ಮಳೆಯಾಗಿದೆ. ಬಳ್ಳಾರಿ, ಗದಗ, ವಿಜಯನಗರ ಜಿಲ್ಲೆಗಳಲ್ಲಿ ಮಾತ್ರ ವಾಡಿಕೆಗಿಂತ ತುಸು ಹೆಚ್ಚು ಮಳೆಯಾಗಿದೆ.

ಗಿದದಲ್ಲೇ ಹೆಸರು ಕಾಳು ಮೊಳಕೆ

ಹೆಸರು ಎರಡೂವರೆ ತಿಂಗಳ ಬೆಳೆ. ಜೂನ್ ಮೊದಲ ವಾರದಲ್ಲೇ ಬಿತ್ತನೆ ಆಗಿದ್ದು, ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ಕಟಾವಿಗೆ ಬರುತ್ತದೆ. ಕೆಲವೆಡೆ ಹಳದಿ ರೋಗದಿಂದ ಒಂದಷ್ಟು ಬೆಳೆ ಹಾಳಾಗಿದೆ. ಸದ್ಯ ಮಳೆ ನಿಂತರೆ ಒಂದಿಷ್ಟು ಬೆಳೆ ಕೈಗೆ ಸಿಗುತ್ತದೆ. ಇಲ್ಲದಿದ್ದರೆ ಸಂಪೂರ್ಣ ಹಾಳಾಗಿ ಹೋಗಲಿದೆ. ತೇವಾಂಶ ಹೆಚ್ಚಿ ಈಗಾಗಲೇ ಗಿಡದಲ್ಲಿ ಕಾಳು ಉಬ್ಬಿದ್ದು, ಅಲ್ಲಿಯೇ ಮೊಳಕೆ ಒಡೆಯುತ್ತಿವೆ.

ಬೆಳೆ ಹಾನಿ (ಪ್ರಾಥಮಿಕ ವರದಿ)

ಜಿಲ್ಲೆ	ಹಾನಿ ಪ್ರದೇಶ (ಹೆಕ್ಟೇರ್)
ಬೀದರ್	569
ಬಾಗಲಕೋಟೆ	4,885
ಕೊಪ್ಪಳ	120
ಬೆಳಗಾವಿ	13,000

ಕೊಯ್ಲಿಗೆ ಬಂದಿರುವ ಹೆಸರು ನಿರಂತರ ಮಳೆಯಿಂದ ಹಾನಿಯಾಗಲಿದೆ. ಮಳೆ ಮುಂದುವರಿದರೆ ಸೋಯಾಬೀನ್, ಮೆಕ್ಕೆಜೋಳ, ಹತ್ತಿ ಬೆಳೆಗೂ ಹಾನಿಯಾಗುವ ಸಾಧ್ಯತೆ ಇದೆ.

- ಮಂಜುನಾಥ ಅಂತರವಳ್ಳಿ ಜಂಟಿ ನಿರ್ದೇಶಕ, ಕೃಷಿ ಇಲಾಖೆ

V-karnataka pg 04

V-karnataka pg 07

ಅಡಕೆ ಬೆಳೆಗಾರರ ಸಂಕಷ್ಟ ನಿವಾರಣೆಗೆ ಒತ್ತಾಯ

ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿದ ರಾಜ್ಯ ಸಂಸದರ ನಿಯೋಗ | ವಿದೇಶಿ ಆಕ್ರಮ ಆಮದಿಗೆ ಕಡಿವಾಣ ಹಾಕಲು ಮನವಿ

■ **ವಿಕ ಸುದ್ದಿಲೋಕ** ದಾವಣಗೆರೆ

ಕರ್ನಾಟಕದಲ್ಲಿ ಅಡಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆ ಕುರಿತು ರಾಜ್ಯದ ಸಂಸದರ ನಿಯೋಗ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವಾಣ್ ಅವರನ್ನು ಭೇಟಿ ಮಾಡಿ ಚರ್ಚಿಸಿತು.

ಅಡಕೆ ಮತ್ತು ಮಾನವ ಆರೋಗ್ಯದ ಮೇಲೆ ಪ್ರಮಾಣಾಧಾರಿತ ಸಂಶೋಧನೆ ನಡೆಸಲು ಕೃಷಿ ಸಚಿವಾಲಯ ಮಂಜೂರು ಮಾಡಿದ ನಿಧಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಿಯೋಗ ಒತ್ತಾಯಿಸಿತು. ಅಡಕೆ ಬೆಳೆಗೆ ತಗುಲಿರುವ ಹಳದಿ ಎಲೆ ಹಾಗೂ ಹುಳು ರೋಗಗಳಿಗೆ ಸಮಗ್ರ ದೀರ್ಘಕಾಲಿಕ ಅಧ್ಯಯನ ನಡೆಸಲು ವೈಜ್ಞಾನಿಕ ಸಂಸ್ಥೆಗಳ ಪಾಲ್ಗೊಳ್ಳುವಿಕೆ ಅಗತ್ಯವೆಂದು ತಿಳಿಸಿತು.

ಆಮದು ಅನುಮತಿಗೆ ಸಲಹೆ ಸೂಕ್ತ: ಅಡಕೆ ಆಕ್ರಮ ಆಮದು ತಡೆಗಟ್ಟಲು ಕಸ್ಟಮ್ಸ್ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ, ಆಮದು ಅನುಮತಿಗೆ ಮುನ್ನ ಕ್ಯಾಂಪ್ಕೊ, ಟಿಎಸ್‌ಎಸ್, ಮ್ಯಾಮ್ಕೋಸ್ ಮುಂತಾದ ಸಹಕಾರಿಗಳ ಸಲಹೆ ಪಡೆಯುವುದು ಸೂಕ್ತವೆಂದು ಸೂಚಿಸಲಾಯಿತು. ಹೆಚ್ಚಿನ ಪ್ರಮಾಣದ ಸಾಗಣೆಗಳಿಗೆ ಜಿಪಿಎಸ್ ಟ್ಯಾಕಿಂಗ್ ಮತ್ತು ತಪಾಸಣಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಯಿಂದ ಆಕ್ರಮ ವಹಿವಾಟು, ಅಂಡರ್-ಬಿಲ್ಲಿಂಗ್ ತಡೆಗಟ್ಟಲು ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿತು.



ರಾಜ್ಯ ಸಂಸದರ ನಿಯೋಗ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವಾಣ್ ಅವರನ್ನು ಭೇಟಿ ಮಾಡಿ ಚರ್ಚಿಸಿತು.

ಇತ್ತೀಚೆಗೆ ಅಮೆರಿಕದಲ್ಲಿ ಅಡಕೆ ಎಲೆಗಳಿಂದ ತಯಾರಾದ ಬಯೋಡಿಗ್ರೇಡಬಲ್ ತಟ್ಟೆಗಳು ಕ್ಯಾನ್ಸರ್ ಉಂಟುಮಾಡುತ್ತವೆ ಎಂಬ ವರದಿ ರಫ್ತು ಹಾನಿಗೊಳಗಾಗಲು ಕಾರಣವಾದ ಹಿನ್ನೆಲೆಯಲ್ಲಿ ಭಾರತದಲ್ಲಿಯೇ ವೈಜ್ಞಾನಿಕ ಅಧ್ಯಯನ ನಡೆಸಿ ಸೂಕ್ತ ಮಾಹಿತಿಯನ್ನು ಒದಗಿಸುವ ಅಗತ್ಯವಿದೆ ಎಂದು ನಿಯೋಗ ಹೇಳಿತು.

ಆಧುನಿಕ ತಂತ್ರಜ್ಞಾನ ಅಗತ್ಯ: ಹವಾಮಾನ ಬದಲಾವಣೆಯಿಂದ ಬೆಳೆಗಳ ಮೇಲೆ ಉಂಟಾಗುತ್ತಿರುವ ಪರಿಣಾಮ ಗಮನಿಸಿ ಮಳೆ, ವಿಪತ್ತು ಹಾಗೂ ರೋಗಗಳ ಕುರಿತು ನಿಖರ ಮಾಹಿತಿ ಪಡೆಯಲು ಆಧುನಿಕ ತಂತ್ರಜ್ಞಾನ ಬಳಕೆಯ ಅಗತ್ಯತೆಯನ್ನು ನಿಯೋಗ ಒತ್ತಿ ಹೇಳಿತು. ಬೆಳೆ ವಿಮೆ ಯೋಜನೆಗಳನ್ನು ಬಲಿಷ್ಠ ಮತ್ತು ತಂತ್ರಜ್ಞಾನ ಆಧಾರಿತವಾಗಿಸಲು ಕೇಂದ್ರ-ರಾಜ್ಯ ಸರಕಾರಗಳ ಸಮನ್ವಯ ಅಗತ್ಯವಿದೆ ಎಂಬುದನ್ನು ಕೃಷಿ ಸಚಿವರ ಗಮನಕ್ಕೆ ತಂದಿತು.

ಈ ವೇಳೆ ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ, ಆಹಾರ, ಸಾರ್ವಜನಿಕ ವಿತರಣೆ ಮತ್ತು ನವೀಕರಿಸುವ ಇಂಧನ ಮೂಲಗಳ ಸಚಿವ ಪ್ರಹ್ಲಾದ್ ಜೋಶಿ, ರೈಲ್ವೆ ಮತ್ತು ಜಲಶಕ್ತಿ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಸೇರಿ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ವಿಶ್ವೇಶ್ವರ ಹೆಗಡೆ ಕಾಗೇರಿ, ಬಿ.ವೈ. ರಾಘವೇಂದ್ರ, ಕ್ಯಾಪ್ಟನ್ ಬ್ರಿಜೇಶ್ ಚೌಟಾ, ಕೋಟ ಶ್ರೀನಿವಾಸ ಪೂಜಾರಿ, ಯದುವೀರ್ ಒಡೆಯರ್, ಗೋವಿಂದ ಕಾರಜೋಳ, ಮಾಜಿ ಸಚಿವರಾದ ಅರಗ ಜ್ಞಾನೇಂದ್ರ ಹಾಗೂ ಕ್ಯಾಂಪ್ಕೋ ಅಧ್ಯಕ್ಷ ಕಿಶೋರ್ ಕೊಡಿಗೆ ಇದ್ದರು.

ಜಿಎಸ್‌ಟಿ ದರ ಶೇ. 2ಕ್ಕೆ ಇಳಿಸಿ

ಆಡಕೆಯ ಮೇಲಿನ ಜಿಎಸ್‌ಟಿ ದರವನ್ನು ಶೇ.5ರಿಂದ ಶೇ.2ಕ್ಕೆ ಇಳಿಸುವಂತೆ ಮನವಿ ಮಾಡಲಾಯಿತು. ಜಿಪಿಎಸ್ ಟ್ರ್ಯಾಕಿಂಗ್ ಮತ್ತು ಇ-ಡಾಕ್ಯುಮೆಂಟೇಶನ್ ಕಡ್ಡಾಯಗೊಳಿಸಿದರೆ ತೆರಿಗೆ ನಷ್ಟವಿಲ್ಲದೆ ಆದಾಯವನ್ನು ಕಾಪಾಡಬಹುದೆಂದು ಸೂಚಿಸಲಾಯಿತು. ಜೊತೆಗೆ, ಗೋದಾಮುಗಳ ಕೊರತೆಯಿಂದ ಸಣ್ಣ ರೈತರು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾವಾರು ಗೋದಾಮು ನಿರ್ಮಾಣಕ್ಕೆ ಸಹಕಾರಿಗಳಿಗೆ ಸಬ್ಸಿಡಿ ಆಧಾರಿತ ನೆರವು ನೀಡುವಂತೆ ಸಂಸದರ ನಿಯೋಗ ಮನವಿ ಮಾಡಿತು.

ಪ್ರತ್ಯೇಕ ಮಂಡಳಿ ರಚಿಸಿ

ದಾವಣಗೆರೆ ಜಿಲ್ಲೆಯ ಅಡಕೆ ಬೆಳೆಗಾರರ ಸಂಕಷ್ಟಗಳ ಕುರಿತು ಸಹ ನಿಯೋಗದಲ್ಲಿ ಪ್ರಸ್ತಾಪವಾಯಿತು. ಅಡಕೆಗೆ ಪ್ರತ್ಯೇಕ ಮಂಡಳಿ ರಚನೆ ಕುರಿತು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಈಗಾಗಲೇ ಸದನದಲ್ಲಿ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದರು. ಈ ಬಗ್ಗೆಯೂ ಚರ್ಚೆಸಲಾಯಿತು.

ಖಿನ್ನತೆ ನಿವಾರಕವಾಗಿ ಅಡಕೆ!

ಡಾ.ಎಸ್.ಕೇಶವ ಭಟ್, ನಿರ್ವಾಹಕ ಅಧಿಕಾರಿ, ಎಆರ್‌ಡಿಎಫ್

ಖಿನ್ನತೆ ಎಂಬುದು ಒಂದು ಸಂಕೀರ್ಣ ನರಸಂಬಂಧಿತ ಮಾನಸಿಕ ಅಸ್ವಸ್ಥತೆ. ಇತ್ತೀಚಿಗಿನ ದಿನಗಳಲ್ಲಿ ಒತ್ತಡದ ಬದುಕಿನಿಂದಾಗಿ ಈ ಸಮಸ್ಯೆ ಇನ್ನೂ ಜಾಸ್ತಿ. ಇದರಿಂದಾಗಿ ವ್ಯಕ್ತಿಯ ಜೀವನ ಶೈಲಿ ಮತ್ತು ಅವರ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ವ್ಯತ್ಯಾಸ ಕಂಡುಬರುವುದು, ದುಃಖ, ಹತಾಶೆ, ಶೂನ್ಯತೆ, ಕಿರಿಕಿರಿ ಭಾವನೆಗಳು, ಆಸಕ್ತಿ ಇಲ್ಲದಿರುವುದು, ಅಸಹಾಯಕತೆ, ಸಿಡುಕು ಸ್ವಭಾವ, ಮೊದಲಾದವುಗಳು ಇದರ ಪ್ರಮುಖ ಲಕ್ಷಣಗಳು ಎದ್ದುಕಾಣುತ್ತದೆ. ಈ ಸಮಸ್ಯೆ ತೀವ್ರಗತಿಯಲ್ಲಿ ಕಂಡುಬಂದರೆ ಅಂತಹವರು ಆತ್ಮಹತ್ಯೆಗೂ ಹೇಸುವುದಿಲ್ಲ. ವಿಶ್ವದಾದ್ಯಂತ ಸುಮಾರು 280 ಮಿ.ಜನರು ಇಂತಹ ಸಂಕೀರ್ಣ ಸಮಸ್ಯೆಯಿಂದ ಬಳಲುತ್ತಿರುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ 2021 ರಲ್ಲೇ ಹೇಳಿದೆ.

ಅನೇಕ ಖಿನ್ನತೆಶಮನಕಾರಿ ರಾಸಾಯನಿಕ ಔಷಧಿಗಳು ಈ ಮನೋವ್ಯಾಧಿಯ ಚಿಕಿತ್ಸೆಯಲ್ಲಿ ಹೆಚ್ಚಾಗಿ ಬಳಸುವುದನ್ನು ನಾವು ಕಾಣುತ್ತೇವೆ. ಆದರೆ, ಅಂತಹ ಹಲವಾರು ಖಿನ್ನತೆ ಶಮನಕಾರಿ ಔಷಧಿಗಳನ್ನು ದೀರ್ಘ ಕಾಲ ಸೇವಿಸಿದರೆ ಅವುಗಳಿಂದ ಕೆಲವು ಅಡ್ಡ ಪರಿಣಾಮಗಳನ್ನು ಕೂಡ ಅನುಭವಿಸಬೇಕಾಗುತ್ತದೆ. ಆದ್ದರಿಂದ ರಾಸಾಯನಿಕ ಔಷಧಿಗಳ ಬದಲಿಗೆ ಅಷ್ಟೇ ಪರಿಣಾಮಕಾರಿಯಾದ, ಆದರೆ ಹೆಚ್ಚು ಸುರಕ್ಷಿತವಾದ, ಸಸ್ಯಜನ್ಯ ಔಷಧಿಗಳನ್ನು ಕಂಡುಹಿಡಿಯುವ ಅಭಿವೃದ್ಧಿ ಪಡಿಸುವುದು ಇಂದಿನ ಅವಶ್ಯಕತೆ. ಈ ನಿಟ್ಟಿನಲ್ಲಿ ಈಗಾಗಲೇ ಅನೇಕ ಸಂಶೋಧನೆಗಳು ಪ್ರಗತಿಯಲ್ಲಿವೆ. ಅದರಲ್ಲಿ ಅಡಕೆ ಕೂಡ ಒಂದು ಎನ್ನುವುದು ನಮಗೆಲ್ಲ ಹೆಮ್ಮೆತರುವ ವಿಚಾರ.

ಖಿನ್ನತೆ ನಿವಾರಣೆಯಲ್ಲಿ ಅಡಕೆಯ ಮಹತ್ವದ ಬಗ್ಗೆ ಹಲವಾರು ವೈಜ್ಞಾನಿಕ ಸಂಶೋಧನೆಗಳು ಈಗಾಗಲೇ ಆಗಿವೆ. ಅವುಗಳಲ್ಲಿ ಹೆಚ್ಚಿನವು ಮೂಷಿಕಗಳ ಮೇಲೆ ಮಾಡಿದ ಪ್ರಯೋಗಗಳಾಗಿದ್ದು, ಈ ಸಂಶೋಧನೆಗಳನ್ನು ಮಾಡಲು ಅಡಕೆಯ ಸಾರವನ್ನು ಎರಡು ರೀತಿಯಲ್ಲಿ ಬಳಸಿದ್ದಾರೆ. ಒಂದು ಅಡಕೆ ಸಾರವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಮೂಷಿಕಗಳಿಗೆ ಚುಚ್ಚಿ (ಐಪಿ ಇಂಜೆಕ್ಷನ್), ಇನ್ನೊಂದು ಅವುಗಳನ್ನು ಬಾಯಿ ಮೂಲಕ (ಓರಲ್ ಫೀಡಿಂಗ್) ಕೊಟ್ಟು, ಇಂಜೆಕ್ಷನ್ ಮೂಲಕ ಮಾಡಿದ ಸಂಶೋಧನೆಗಳು ಪಾಕಿಸ್ತಾನದ ಕರಾಚಿ ವಿಶ್ವವಿದ್ಯಾಲಯದ ಇಂಟರ್ನೇಷನಲ್ ಸೆಂಟರ್ ಫಾರ್ ಕೆಮಿಕಲ್ ಅಂಡ್ ಬಯೋಲಾಜಿಕಲ್ ಸ್ಟೆಡೀಸ್ ಸಂಸ್ಥೆಯ ಫಾರ್ಮಕಾಲಜಿ ವಿಭಾಗದ ಡಾ. ಅಹ್ಸಾನಾ ದಾರ್ ಮತ್ತು ಖಾಟೂನ್ ಎಂಬವಿಜ್ಞಾನಿಗಳು ಇಲಿಗಳ ಮೇಲೆ ನಡೆಸಿದ ಪ್ರಯೋಗಗಳಲ್ಲಿ ಎಥನಾಲ್ ಉಪಯೋಗಿಸಿ ತೆಗೆದ ಅಡಕೆಯ ಸಾರ ಖಿನ್ನತೆ ನಿವಾರಕವಾಗಿ ವರ್ತಿಸಿದೆ ಎಂಬುದಾಗಿ ಹೇಳಿದ್ದಾರೆ. ಇನ್ನೊಂದು ಅಧ್ಯಯನದಲ್ಲಿ ಡೈಕ್ಲೋರೊಮೀಥೇನ್ ಉಪಯೋಗಿಸಿ ತೆಗೆದ ಅಡಕೆಯ ಸಾರವನ್ನು ಇಲಿಗಳ ಮೇಲೆ ಒಂದು ಮಿ. ಲೀ.ಗೆ 665 ಮೈಕ್ರೋ ಗ್ರಾಂ ಪ್ರಮಾಣದಲ್ಲಿಪ್ರಯೋಗಿಸಿದಾಗ ಅವುಗಳಲ್ಲಿನ ಖಿನ್ನತೆಯ ಪ್ರಮಾಣ ಶೇ. 50 ರಷ್ಟು ಕಡಿಮೆ ಆಗಿತ್ತು. ಅಲ್ಲದೆ, ಅಡಕೆಯ ಅಂತಹ ಸಾರವು ಖಿನ್ನತೆ ಉಪಶಮನ ಔಷಧಿಯಾದ moclobemide ನಷ್ಟೇ ಪರಿಣಾಮಕಾರಿಯಾಗಿತ್ತು ಎಂಬುದಾಗಿ ಕೂಡ ಹೇಳಿರುತ್ತಾರೆ.

ಡಾ. ಅಹ್ಸಾನಾ ದಾರ್ ಮತ್ತು ಅವರ ತಂಡ ಖಿನ್ನತೆಗೆ ಕಾರಣವಾಗುವ ಮಾನೋ ಅಮೈನ್ ಒಕ್ಸಿಡೇಸ್ ಎನ್ನುವ ಕಿಣ್ವವನ್ನು ಅಡಕೆಯ ಜಲೀಯ ಸಾರ ಸಮರ್ಪಕವಾಗಿ ನಿಯಂತ್ರಿಸುವುದು ಎಂಬುದಾಗಿ ಹೇಳಿದ್ದಾರೆ. ಅಡಕೆಯ ಜಲೀಯ ಸಾರ ಮಾನೋ ಅಮೈನ್ ಒಕ್ಸಿಡೇಸ್ ಕಿಣ್ವವನ್ನು ನಿಯಂತ್ರಿಸಲು ಉಪಯೋಗಿಸುವ clorgyline ಎಂಬ ರಾಸಾಯನಿಕದಷ್ಟೇ ಪರಿಣಾಮಕಾರಿ ಎಂಬುದಾಗಿ ಕಂಡುಕೊಂಡಿದ್ದಾರೆ.

ಕರಾಚಿಯ ಆಘಾ ಖಾನ್ ಯುನಿವರ್ಸಿಟಿ ಹಾಸ್ಪಿಟಲ್‌ನ ಡಾ. ಶಗುಫ್ತಾ ಖಾನ್ ಮತ್ತು ಅವರ ತಂಡ ಮಾಡಿದ ಒಂದು ಪ್ರಯೋಗದಲ್ಲಿಅಡಕೆ ಸಾರದ ಡಿಕ್ಲೋರೊಮೀಥೇನ್ ಭಾಗ ಕೂಡ ಇಲಿಗಳಲ್ಲಿ ಸೆರಟೋನಿನ್ ಅಂಶವನ್ನು ಶೇ. 50 ರಷ್ಟು ಹೆಚ್ಚಿಸಿರುವುದು ಕಂಡುಬಂದಿದೆ.

ಚಿಕ್ಕಿಲಿಗಳ ಮೇಲೆ ನಡೆಸಿದ ಇನ್ನೊಂದು ಪ್ರಯೋಗದಲ್ಲಿ ಎನ್-ಹೆಕ್ಸೇನ್ ಉಪಯೋಗಿಸಿ ತೆಗೆದ ಅಡಕೆಯ ಸಾರವನ್ನು ಒಂದು ಕೆ ಜಿ ದೇಹದ ತೂಕಕ್ಕೆ 50 ಮಿ. ಗ್ರಾಂ ಪ್ರಮಾಣದಲ್ಲಿ ಒಮ್ಮೆ ಚುಚ್ಚಿದಾಗ ಅವುಗಳಲ್ಲಿ ಖಿನ್ನತೆ ಗಣನೀಯವಾಗಿ ಕಡಿಮೆಯಾಗಿತ್ತು ಎಂಬುದಾಗಿ ಇಂಡೋನೇಷ್ಯಾದ ರಿಯೋ ವಿಶ್ವವಿದ್ಯಾಲಯದ ವಿಜ್ಞಾನಿಗಳಾದ ಡಾ. ರಿಯಾನ್ ನೋವಿಯಾನ್ಸಿ ಪ್ರಕಟಿಸಿದ್ದಾರೆ. ಹಾಗೆ ತೆಗೆದ ಅಡಕೆ ಸಾರವನ್ನು 7 ದಿವಸಗಳವರೆಗೆ ಚುಚ್ಚಿ ನೋಡಿದಾಗಲೂ ಚಿಕ್ಕಿಲಿಗಳ ಯಾವುದೇ ದೇಹದ ಭಾಗಗಳಲ್ಲಿ ಏನೊಂದೂ ವಿಷಕಾರಿ ಪರಿಣಾಮಗಳು ಗೋಚರಿಸಿರಲಿಲ್ಲ. ಅಡಕೆ ಸಾರವನ್ನು ತಿನ್ನಿಸುವ ಮೂಲಕ ಅಡಕೆ ಸಾರವನ್ನು ಇಂಜೆಕ್ಷನ್ ಮೂಲಕ ಅಲ್ಲದೆ, ಬಾಯಿಯ ಮೂಲಕ ಸೇವಿಸಿದಾಗಲೂ ಅದು ಖಿನ್ನತೆಯನ್ನು ಶಮನ ಮಾಡುತ್ತದೆ ಎಂಬುದನ್ನು ಚೆನ್ನೈನ ಚೆಟ್ಟಿನಾಡ್ ಹಾಸ್ಪಿಟಲ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ನಲ್ಲಿ ಪ್ರಾಧ್ಯಾಪಿಕೆಯಾದ ಡಾ. ರುಕ್ಮಿಣಿ ಅವರ ತಂಡ ಸಾಬೀತು ಪಡಿಸಿದ್ದಾರೆ.

ಮಹಾರಾಷ್ಟ್ರ ಚಂದ್ರಾಪುರ ಸರ್ಕಾರಿ ವೈದಕೀಯ ಕಾಲೇಜಿನ ಡಾ. ಮನೋಹರ್ ಬೆಂಡೆ ಮತ್ತು ಅವರ ತಂಡ ಎಥನಾಲ್ ಉಪಯೋಗಿಸಿ ತೆಗೆದ ಅಡಕೆ ಸಾರವನ್ನು ಒಂದು ಕೆ.ಜಿ ದೇಹದ ತೂಕಕ್ಕೆ 50 ಮಿ. ಗ್ರಾಂ ಪ್ರಮಾಣದಲ್ಲಿ ಇಲಿಗಳ ಬಾಯಿಯ ಮೂಲಕ ಕೊಟ್ಟಾಗ ಅವುಗಳ ಚಲನವಲನಗಳಲ್ಲಿ ಅಡಕೆ ಸಾರ ಕೊಡದ ಇಗಳಿಗಿಂತ ಗಮನಾರ್ಹವಾಗಿ (ಶೇ.28) ಹೆಚ್ಚಾಗಿತ್ತು ಎಂಬುದನ್ನು ಮತ್ತೊಂದು ಅಧ್ಯೆಯನದಲ್ಲಿ ಕಂಡುಬಂದಿದೆ. ಮಂಗಳೂರಿನ ಎ. ಜೆ. ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ರಿಸರ್ಚ್ ಸೆಂಟರ್‌ನ ಡಾ. ಶ್ರೀನಿವಾಸ್ ಭಟ್ ಅವರ ತಂಡ ಎಥನಾಲ್ ಉಪಯೋಗಿಸಿ ತೆಗೆದ ಅಡಕೆಯ ಸಾರವನ್ನು ಚಿಕ್ಕಿಲಿಗಳಿಗೆ ತಿನ್ನಿಸಿ ಎರಡು ರೀತಿಯ ಅಧ್ಯಯನ ಮಾಡಿದ್ದಾರೆ. 1ನೇ ಅಧ್ಯಯನದಲ್ಲಿ, ಅಡಕೆಯಸಾರವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಒಮ್ಮೆ ಮಾತ್ರ ತಿನ್ನಿಸಿ, ಇನ್ನೊಂದರಲ್ಲಿ 10 ದಿವಸಗಳವರೆಗೆ ಅದೇ ಪ್ರಮಾಣದಲ್ಲಿ ದಿನಕ್ಕೊಮ್ಮೆ ತಿನ್ನಿಸಿ ನೋಡಿದ್ದಾರೆ. ಅಡಕೆ ಸಾರವನ್ನು ಒಮ್ಮೆ ಮಾತ್ರ ಒಂದು ಕೆ ಜಿ ದೇಹದ ತೂಕಕ್ಕೆ 40, 80 ಮತ್ತು 160 ಮಿ.ಗ್ರಾಂ ಪ್ರಮಾಣದಲ್ಲಿ ತಿನ್ನಿಸಿದಾಗ, 80 ಮಿ.ಗ್ರಾಂ ಪ್ರಮಾಣ ಖಿನ್ನತೆ ನಿವಾರಕಕ್ಕೆ ಅತ್ಯಂತ ಸೂಕ್ತ ಎಂಬುದಾಗಿ ಕಂಡು ಬಂತು. ಆದರೆ, ಅದರ ಪರಿಣಾಮ ಖಿನ್ನತೆ ನಿವಾರಕ ಔಷಧಿಯಾದ ಇಮಿಪ್ರಮೈನ್ (10 ಮಿ. ಗ್ರಾಂ) ನಷ್ಟು ಪರಿಣಾಮಕಾರಿಯಾಗಿರಲಿಲ್ಲ. 2ನೇ ಅಧ್ಯಯನದಲ್ಲಿ ಅಷ್ಟೇ ಪ್ರಮಾಣದಲ್ಲಿ ಅಡಕೆ ಸಾರವನ್ನು 10 ದಿವಸಗಳ ವರೆಗೆ ತಿನ್ನಿಸಿದಾಗ ಅಡಕೆ ಸಾರ 40 ಮಿ. ಗ್ರಾಂ ಪ್ರಮಾಣ ಇಮಿಪ್ರಮೈನ್ ನಿಂದಲೂ ಪರಿಣಾಮಕಾರಿಯಾಗಿ ಕಂಡು ಬಂದಿದೆ.

ಅಡಕೆಯ ಜಲೀಯ ಸಾರ ಕೂಡ ಒಳ್ಳೆಯ ರೀತಿಯಲ್ಲಿ ಖಿನ್ನತೆ ಶಮನಕಾರಿಯಾಗಿ ವರ್ತಿಸುತ್ತದೆ ಎಂಬುದಾಗಿ ಹೈದರಾಬಾದಿನಲ್ಲಿರುವ ಉಸ್ಮಾನಿಯಾ ವಿಶ್ವವಿದ್ಯಾಲಯದ ವಿಜ್ಞಾನಿಯಾದ ಡಾ. ಉದಯ ಕುಮಾರ್ ಮತ್ತು ಅವರ ತಂಡ ಜರ್ನಲ್ ಆಫ್ ಡ್ರಗ್ ವಿಜಿಲೆನ್ಸ್ ಆ್ಯಂಡ್ ಆಲ್ಟರ್ನೇಟಿವ್ ಥೆರಪೀಸ್ ಎಂಬ ವೈಜ್ಞಾನಿಕ ಸಂಚಿಕೆಯ 2021 ರ ಆವೃತ್ತಿಯಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಅವರು ಅಡಕೆ ಸಾರವನ್ನು ಒಂದು ಕೆ ಜಿ ದೇಹದ ತೂಕಕ್ಕೆ 10 ಮಿ. ಗ್ರಾಂ ನಂತೆ 14 ದಿವಸ ಚಿಕ್ಕಿಲಿಗಳಿಗೆ ಬಾಯಿಯ ಮೂಲಕ ಕೊಟ್ಟಿದ್ದರು.

ಅಡಕೆ-ಹೊಸ ಭರವಸೆ

ಹೀಗೆ ಮೂಷಿಕಗಳ ಮೇಲೆ ನಡೆಸಿದ ಹಲವಾರು ಸಂಶೋಧನೆಗಳು ''ಅಡಕೆ ಖಿನ್ನತೆ ನಿವಾರಕ'' ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆದಾಗ್ಯೂ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆದು, ಅದರಲ್ಲೂ, ಮಾನವನ ಮೇಲಿನ ಕ್ಲಿನಿಕಲ್ ಟ್ರಯಲ್ ಮೂಲಕ ಸಾದರಪಡಿಸಿ ಅಡಕೆ ಖಿನ್ನತೆ ನಿವಾರಕಕ್ಕೆ ಒಂದು ಉತ್ತಮ ಸಸ್ಯಜನ್ಯ ಔಷಧಿ ಎಂಬುದಾಗಿ ಸಾಬೀತಾದಲ್ಲಿ ಅಡಕೆಯ ಭವಿಷ್ಯ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ.



ಹಲವು ಸಂಶೋಧನೆಗಳಿಂದ ವ್ಯಕ್ತಗೊಂಡಿದೆ

Hosadiganta pg 08

ರೈತ ಎನ್.ಸಿ.ಪಾಟೇಲ್ ಅಭಿವೃದ್ಧಿಪಡಿಸಿದ ವಿಶಿಷ್ಟ ತಳಿ
ಜಂಬು ನೇರಳೆ ತಳಿ ನೋಂದಣಿ

Hosadiganta pg 10

ಬೆಂಗಳೂರು: ಸಿದ್ದು ಮತ್ತು ಶಂಕರ ಹಲಸಿನ ಹಣ್ಣಿನ ಮಾದರಿಯಲ್ಲಿ ರಾಜಾನುಕುಂಟೆಯ ರೈತ ಎನ್.ಸಿ. ಪಟೇಲ್ ಅವರು ಅಭಿವೃದ್ಧಿಪಡಿಸಿರುವ ಮೂರು ಉತ್ಕೃಷ್ಟ ಜಂಬು ನೇರಳೆ ಹಣ್ಣಿನ ತಳಿಗಳನ್ನು ಸಸ್ಯ ಪ್ರಭೇದಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ (ಪಿಪಿವಿಎಫ್‌ಆರ್‌ಎ) ದಲ್ಲಿ ನೋಂದಾಯಿಸಲು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಮುಂದಾಗಿದೆ.

ಒಣ ಭೂಮಿಯಲ್ಲಿ ಅತ್ಯಂತ ಕಡಿಮೆ ನೀರು ಬಳಸಿ ರೈತ ಡಾ.ಎನ್.ಸಿ. ಪಟೇಲ್ ಅವರು ಪಟೇಲ್ ಸಮೃದ್ಧಿ, ಪಟೇಲ್ ಜಂಬೊ, ಪಟೇಲ್ ಅಕಲ್ ಎಂಬ ಹೆಸರಿನ ಮೂರು ತಳಿಯನ್ನು ಬೆಳೆದು ಅವುಗಳಿಗೆ ಪೇಟೆಂಟ್ ಪಡೆಯಲು ಮುಂದಾಗಿದ್ದಾರೆ. ಸಾಮಾನ್ಯ ನೇರಳೆಗಿಂತ ಪಟೇಲ್ ತಳಿಯ ನೇರಳೆಯು ಅಧಿಕ ಸಿಹಿ, ಹೆಚ್ಚು ರುಚಿಯ ಜತೆಗೆ ಗಾತ್ರವೂ ಹೆಚ್ಚಾಗಿದೆ. ಆಮ್ಲೀಯ ಗುಣಗಳನ್ನು ಹೊಂದಿದ್ದು, ವಿಟಮಿನ್ ಸಿ, ಎ ಮತ್ತಿತರ ಪೋಷಕಾಂಶಗಳನ್ನು ಹೇರಳವಾಗಿ ಹೊಂದಿದ್ದು, ಮಧುಮೇಹ ರೋಗ ನಿಯಂತ್ರಣಕ್ಕೆ ಸಹಕಾರಿಯಾಗಿವೆ.



ಮಾರುಕಟ್ಟೆಯಲ್ಲಿ ಸೀಸನ್‌ನಲ್ಲಿ ಮಾತ್ರ ನೇರಳೆ ಹಣ್ಣು ಸಿಗುತ್ತದೆ. ಆದರೆ ಈ ಪಟೇಲ್ ತಳಿಗಳು ಸೀಸನ್ ಮುಗಿದ ನಂತರವೂ ಸಿಗುವುದು ವಿಶೇಷವಾಗಿದೆ. ಪ್ರತಿ ಹಣ್ಣು ಸುಮಾರು 7.1 ಗ್ರಾಂ ನಿಂದ ಹಿಡಿದು 12.65 ಗ್ರಾಂನಷ್ಟು ತೂಕವನ್ನು ಹೊಂದಿವೆ.

ಈ ವಿಶೇಷಗಳ ಗುಣ, ಲಕ್ಷಣಗಳು ಮತ್ತು ಹಣ್ಣಿನಲ್ಲಿರುವ ವಿಶೇಷ ಅಂಶಗಳನ್ನು ಐಐ ಎಚ್ ಆರ್ ನಿರ್ದೇಶಕ ಡಾ.ಟಿ.ಕೆ. ಬೆಹೆರಾ ಅವರ ನೇತೃತ್ವದಲ್ಲಿ ಪ್ರಧಾನ ವಿಜ್ಞಾನಿಗಳಾದ ಡಾ. ಶಂಕರನ್, ಡಾ.ಕನುಪ್ರಿಯಾ, ಡಾ.ಅರಿವಲಗನ್ ತಂಡ ರೈತರ ತೋಟಕ್ಕೆ ಹೋಗಿ ಅಧ್ಯಯನ ನಡೆಸಿದ್ದು, ಪೇಟೆಂಟ್‌ಗೆ ಸೂಕ್ತವಾದ ತಳಿಗಳಾಗಿವೆ ಎಂದು ಪ್ರಾಧಿಕಾರಕ್ಕೆ ಶಿಫಾರಸು ಮಾಡಿದೆ.